**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಾಮೋಜಿಗೌಡ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಉತ್ತರ**

**ವಿಷಯ:** ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ದಿನಾಂಕ:18.08.2025 ಪ್ರಕಟಗೊಂಡಿರುವಂತೆ ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ 22ಕ್ಕೂ ಹೆಚ್ಚು ಅಧಿಕಾರಿ, ಸಿಬ್ಬಂದಿ ಹುದ್ದೆ ಖಾಲಿ ಇದ್ದು, ದೈನಂದಿನ ನಿರ್ವಹಣೆ, ಆಡಳಿತ ಅಡ್ಡಿಯುಂಟಾಗಿದೆ. ಬನ್ನೇರುಘಟ್ಟ ಉದ್ಯಾನ ಕರ್ನಾಟಕ ಮೃಗಾಲಯ ಪ್ರಾಧಿಕಾರಕ್ಕೆ ಒಳಪಟ್ಟಿದ್ದರೂ ಇಲ್ಲಿರುವ ಪ್ರಮುಖ ಹುದ್ದೆಗಳು ಅರಣ್ಯ ಸೇವೆಯ ಅಧಿಕಾರಿ, ಸಿಬ್ಬಂದಿಯೇ ಕಾರ್ಯನಿರ್ವಹಿಸಬೇಕಿದೆ. ಸದ್ಯ ಬನ್ನೇರುಘಟ್ಟ ಉದ್ಯಾವನದಲ್ಲಿ ಕಾರ್ಯನಿರ್ವಹಣಾಧಿಕಾರಿ ಐಎಫ್‌ಎಸ್ (ಭಾರತೀಯ ಅರಣ್ಯ ಸೇವೆ) ಕೇಡರ್ ಹುದ್ದೆ ಭರ್ತಿಯಾಗಿದೆ, ಸಹಾಯಕ ಕಾರ್ಯನಿರ್ವಹಣಾಧಿಕಾರಿ (ಐಎಫ್‌ಎಸ್ ಅಥವಾ ತತ್ಸಮಾನ ಅರ್ಹತೆ)ಯ ಒಂದು ಹುದ್ದೆ ಖಾಲಿ ಇರುವುದಾಗಿ ತಿಳಿದು ಬಂದಿರುತ್ತದೆ. ವಲಯ ಅರಣ್ಯಾಧಿಕಾರಿ ಮೂರು ಹುದ್ದೆಗಳ ಪೈಕಿ ಒಂದು ಮಾತ್ರ ಭರ್ತಿಯಾಗಿದೆ. ಉಪ ವಲಯ ಅರಣ್ಯಾಧಿಕಾರಿಯ ನಾಲ್ಕು ಹುದ್ದೆ ಇದ್ದು, ಎಲ್ಲವೂ ಭರ್ತಿಯಾಗಿದೆ. ಅರಣ್ಯ ರಕ್ಷಕ ಮತ್ತು ಅರಣ್ಯ ಕಾವಲುಗಾರರ ತಲಾ ಹತ್ತು ಹುದ್ದೆಗಳಿದ್ದು, ಎಲ್ಲವೂ ಖಾಲಿ ಇದೆ. ಬನ್ನೇರುಘಟ್ಟ ಉದ್ಯಾನಕ್ಕೆ ವರ್ಷದಲ್ಲಿ ಸರಾಸರಿ 59 ಲಕ್ಷ ಪ್ರವಾಸಿಗರು ಭೇಟಿ ನೀಡುವುದು ವಾಡಿಕೆಯಾಗಿದೆ. ಈಗಾಗಲೇ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಅಧಿಕಗೊಂಡಿದ್ದು, ಹಲವರು ಪದವಿಯನ್ನು ಪೂರೈಸಿ ಉದ್ಯೋಗಕ್ಕಾಗಿ ಕಾಯ್ದುಕೊಂಡಿದ್ದು, ಈ ರೀತಿ ಖಾಲಿ ಹುದ್ದೆಗಳನ್ನು ಬಾಕಿ ಇಟ್ಟುಕೊಂಡಲ್ಲಿ, ಹಲವು ಉದ್ಯೋಗಕಾಂಕ್ಷಿಗಳಿಗೆ ಅನ್ಯಾಯವಾದಂತಗುತ್ತದೆ. ಈ ಸಂಬಂಧ ಈಗಾಗಲೇ ಸರ್ಕಾರಕ್ಕೆ ಮನವಿಗಳು, ಕೋರಿಕೆಗಳು ಬಂದಿದ್ದರೂ ಸಹ, ಕಾರ್ಯಗತಗೊಳ್ಳದೇ, ಉದ್ಯೋಗಗಳು ಹಾಗೇ ಖಾಲಿಯಾಗಿ ಉಳಿದುಬಿಟ್ಟಿರುವುದು ಶೋಚನೀಯ ಸಂಗತಿ. ಇದರಿಂದ ವರ್ಷದಿಂದ ವರ್ಷಕ್ಕೆ ಉದ್ಯಾನವನ ಪ್ರಗತಿಯತ್ತ ಸಾಗುತ್ತಿರುವುದರಿಂದ, ಆಡಳಿತಾತ್ಮಕ ಕೆಲಸಗಳು, ನಿರ್ವಹಣೆ ಜವಾಬ್ದಾರಿಯೂ ಹೆಚ್ಚಾಗಿರುವುದರಿಂದ, ಖಾಯಂ ಸಿಬ್ಬಂದಿಯ ಅವಶ್ಯಕತೆ ತೀರಾ ಇದೆ. ಖಾಲಿ ಹುದ್ದೆಗಳು ಹಾಗೇ ಬಾಕಿ ಉಳಿದಲ್ಲಿ, ಆಡಳಿತಾತ್ಮಕ ಕೆಲಸಗಳಿಗೆ ಹಿನ್ನಡೆಯುಂಟಾಗಿದೆ. ಆದ್ದರಿಂದ ಈ ಸಂಬಂಧ ಸರ್ಕಾರವು ಕೂಡಲೇ ಹುದ್ದೆ ಭರ್ತಿಗೊಳಿಸಲು, ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸುವ ಸಲುವಾಗಿ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಬೇಕೆಂದು ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಗಮನ ಸೆಳೆಯಬಯಸುತ್ತೇನೆ.

*****

**ಉತ್ತರ:**

ಕರ್ನಾಟಕ ಮೃಗಾಲಯ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಒಟ್ಟು 09 ಮೃಗಾಲಯಗಳು ಕಾರ್ಯ ನಿರ್ವಹಿಸುತ್ತಿದ್ದು. ಸರ್ಕಾರದ ಆದೇಶ ಸಂಖ್ಯೆ: ಅಪಜೀ 129 ಎಫ್.ಪಿ.ಸಿ 2013, ದಿನಾಂಕ:05.07.2018 ರಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರಕ್ಕೆ ಒಟ್ಟು 398 ಹುದ್ದೆಗಳು ಮಂಜೂರಾಗಿದ್ದು, ಸದರಿ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಇಇ 70 ಎಫ್‌ಪಿಸಿ 2018 (ಪಿ-2) ದಿನಾಂಕ:21.12.2019ರ ವೃಂದ ಮತ್ತು ನೇಮಕಾತಿ ನಿಯಮ 2019 ರನ್ವಯ ವಿವಿಧ ಇಲಾಖೆಗಳಿಂದ ನಿಯೋಜನೆ ಮತ್ತು ನೇರ ನೇಮಕಾತಿಗಳ ಮೂಲಕ ಭರ್ತಿ ಮಾಡಲು ಆದೇಶಿಸಲಾಗಿರುತ್ತದೆ. ಅದರಲ್ಲಿ ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ಒಟ್ಟು 156 ಹುದ್ದೆಗಳು ಮಂಜೂರಾಗಿದ್ದು, ಅರಣ್ಯ ಇಲಾಖೆ, ಪಶುಸಂಗೋಪನಾ ಇಲಾಖೆ, ಲೋಕೋಪಯೋಗಿ ಇಲಾಖೆ, ಮತ್ತು ತೋಟಗಾರಿಕೆ ಇಲಾಖೆಗಳಿಂದ ಒಟ್ಟು 38 ಹುದ್ದೆಗಳನ್ನು ನಿಯೋಜನೆ ಮೇಲೆ ಹಾಗೂ ನೇರ ನೇಮಕಾತಿ ಮುಖಾಂತರ 27 ಹುದ್ದೆಗಳನ್ನು ಮತ್ತು ಉಳಿದ 91 ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ಆದೇಶಿಸಲಾಗಿರುತ್ತದೆ. ಅದರಂತೆ ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ 27 ಮತ್ತು ಮೈಸೂರು ಮೃಗಾಲಯಕ್ಕೆ 59 ಹುದ್ದೆಗಳು ಒಟ್ಟು 86 ಸಿ & ಡಿ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕರಡು ಅಧಿಸೂಚನೆಗೆ ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಪತ್ರ ಸಂಖ್ಯೆ: ಅಪಜೀ 28 ಎಫ್‌ಪಿಸಿ 2025 ದಿನಾಂಕ:31.05.2025ರ ಪತ್ರದಲ್ಲಿ ಒಳ ಮೀಸಲಾತಿ ಆದೇಶದ ನಂತರ ಪ್ರಸ್ತಾವನೆಯನ್ನು ಮರು ಸಲ್ಲಿಸುವಂತೆ ನಿರ್ದೇಶಿಸಿರುವುದರಿಂದ ಒಳ ಮೀಸಲಾತಿ ಜಾರಿಯಾದ ನಂತರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಬನ್ನೇರುಘಟ್ಟ ಜೈವಿಕ ಉದ್ಯಾನವನಕ್ಕೆ ಪ್ರತಿ ವರ್ಷ ಸರಾಸರಿ ಅಂದಾಜು 22.00 ಲಕ್ಷ ಪ್ರವಾಸಿಗರು ಭೇಟಿ ನೀಡುತ್ತಿರುವುದರಿಂದ ಮೃಗಾಲಯದ ಸ್ವಚ್ಛತೆ, ಭದ್ರತೆ ಮತ್ತು ದೈನಂದಿನ ಕಾರ್ಯ ಚಟುವಟಿಕೆಗಳಲ್ಲಿ ಯಾವುದೇ ನ್ಯೂನ್ಯತೆಯಾಗದಂತೆ ಹಾಗೂ ಪ್ರಾಣಿ-ಪಕ್ಷಿಗಳಿಗೆ ಮತ್ತು ಪ್ರವಾಸಿಗರಿಗೆ ಯಾವುದೇ ಅನಾನುಕೂಲವಾಗದಂತೆ ಮೃಗಾಲಯ ಸಮರ್ಪಕ ನಿರ್ವಹಣೆ ಹಿತದೃಷ್ಟಿಯಿಂದ ನೇರಗುತ್ತಿಗೆ /ಹೊರಗುತ್ತಿಗೆ ಆದಾರದಲ್ಲಿ 350 ನೌಕರರನ್ನು ನೇಮಕ

ಮಾಡಿಕೊಳ್ಳಲಾಗಿದ್ದು 28 ಕ್ಷೇಮಾಭಿವೃದ್ಧಿ ನೌಕರರು10 ಖಾಯಂ ಅಧಿಕಾರಿ/ಸಿಬ್ಬಂದಿಗಳು ಒಟ್ಟಾರೆ 388 ಅಧಿಕಾರಿ/ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಕೇಂದ್ರ ಮೃಗಾಲಯ ಪ್ರಾಧಿಕಾರದ **Management Effectives Evaluation (MEE) of Indian Zoos** ವರದಿಯಂತೆ **Large Zoo Category** ಯಲ್ಲಿ ಬನ್ನೇರುಘಟ್ಟ ಜೈವಿಕ ಉದ್ಯಾನವನವು ದೇಶದ ಅತ್ಯುತ್ತಮ ಮೃಗಾಲಯದ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿರುತ್ತದೆ.

| ಕ ಸಂ | ಮಂಜೂರಾದ ಹುದ್ದೆ | ವರ್ಗ | ಮಂಜೂರಾದ ಹುದ್ದೆಗಳ ಸಂಖ್ಯೆ | ಒಟ್ಟು ಭರ್ತಿ ಮಾಡದಲಾದ ಹುದ್ದೆ | ಖಾಲಿ ಹುದ್ದೆ | ಷರಾ |
|---|---|---|---|---|---|---|
| 1 | ಕಾರ್ಯನಿರ್ವಾಹಕ ನಿರ್ದೇಶಕರು | ಎ | 1 | 1 | 0 | |
| 2 | ಉಪ ನಿರ್ದೇಶಕರು | ಎ | 1 | 0 | 1 | |
| 3 | ಉಪ ನಿರ್ದೇಶಕರು (AH&VB) | ಎ | 1 | 0 | 1 | |
| 4 | ಸಹಾಯಕ ನಿರ್ದೇಶಕರು (AH&VB) | ಎ | 1 | 0 | 1 | |
| 5 | ಪಶುವೈದ್ಯಾಧಿಕಾರಿ (AH&VB) | ಬಿ | 1 | 1 | 0 | |
| 6 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು | ಎ | 1 | 1 | 0 | |
| 7 | ಲೆಕ್ಕಪರಿಶೋಧನಾ ಅಧಿಕಾರಿ | ಬಿ | 1 | 0 | 1 | |
| 8 | ವಲಯ ಅರಣ್ಯಾಧಿಕಾರಿ | ಬಿ | 3 | 1 | 2 | |
| 9 | ಪತ್ರಾಂಕಿತ ವ್ಯವಸ್ಥಾಪಕರು | ಬಿ | 1 | 1 | 0 | |
| 10 | ಲೆಕ್ಕಪತ್ರ ಅಧೀಕ್ಷಕರು | ಬಿ | 1 | 0 | 1 | |
| 11 | ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಬಿ | 1 | 0 | 1 | |
| 12 | ಉಪ ವಲಯ ಅರಣ್ಯಾಧಿಕಾರಿ | ಸಿ | 4 | 4 | 0 | |
| 13 | ಅರಣ್ಯ ರಕ್ಷಕ | ಸಿ | 8 | 0 | 8 | 10 ಹುದ್ದೆಗಳಲ್ಲಿ ಎರಡು ಹುದ್ದೆಗಳು ಚಿತ್ರದುರ್ಗ ಮತ್ತು ಮೈಸೂರು ಮೃಗಾಲಯಕ್ಕೆ ಸ್ಥಳಾಂತರಿಸಲಾಗಿದೆ. |
| 14 | ಪ್ರಥಮ ದರ್ಜೆ ಸಹಾಯಕರು ವ ಗಣಕ ಯಂತ್ರ ನಿರ್ವಾಹಕರು | ಸಿ | 3 | 1 | 2 | 2 ಹುದ್ದೆಗಳಲ್ಲಿ ಒಂದು ಹುದ್ದೆ ಗದಗ ಮೃಗಾಲಯಕ್ಕೆ ಸ್ಥಳಾಂತರಿಸಲಾಗಿದೆ. |
| 15 | ತೋಟಗಾರಿಕೆ ಸಹಾಯಕರು | ಸಿ | 1 | 0 | 1 | |
| 16 | ಪಶುವೈದ್ಯಕೀಯ ಪ್ರಯೋಗಾಲಯ ಸಹಾಯಕ | ಸಿ | 1 | 0 | 1 | |
| 17 | ಅರಣ್ಯ ವೀಕ್ಷಕರು | ಡಿ | 8 | 0 | 8 | 10 ಹುದ್ದೆಗಳಲ್ಲಿ ಎರಡು ಹುದ್ದೆಗಳು ಚಿತ್ರದುರ್ಗ ಮೃಗಾಲಯಕ್ಕೆ ಸ್ಥಳಾಂತರಿಸಲಾಗಿದೆ. |
| | | | 38 | 10 | 18 | |

ಜೈವಿಕ ಉದ್ಯಾನವನವು ದೇಶದ ಅತ್ಯುತ್ತಮ ಮೃಗಾಲಯದ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿರುವುದು ಇದಕ್ಕೆ ಸಾಕ್ಷಿಯಾಗಿರುತ್ತದೆ.

| ಕ್ರ. ಸಂ. | ನೌಕರರ ವಿವರ | ಒಟ್ಟು ಸಂಖ್ಯೆ |
|---|---|---|
| 1 | ಖಾಯಂ ನೌಕರರು | 10 |
| 2 | ಕ್ಷೇಮಾಭಿವೃದ್ಧಿ ನೌಕರರು | 28 |
| 3 | ನೇರಗುತ್ತಿಗೆ ನೌಕರರು | 132 |
| 4 | ಹೊರಗುತ್ತಿಗೆ ನೌಕರರು | 218 |
| | **ಒಟ್ಟು** | **388.00** |

**ಸಂಖ್ಯೆ: ಅಪಜೀ 78 ಎಫ್‌ಪಿಸಿ 2025**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು